ಶ್ರೀ ವೀರೇಂದ್ರ ಪಾಟೀಲ್.—ಪ್ರೆಸ್ ಕಾರ್ಫರೆನ್ಸ್‌ನಲ್ಲಿ ನಾನು ಯಾವ ಉದ್ದೇಶಕ್ಕಾಗಿ ಅಲ್ಲಿಗೆ ಹೋಗುತ್ತಿದ್ದೇನೆ ಮತ್ತು ಅಲ್ಲಿ ಏನು ಕೆಲಸವಿದೆಯೆಂದು ನಾನು ಹೇಳಲಿಲ್ಲ. ಅನೇಕ ವಿಚಾರಗಳು ಊಹಾಪೋಹವಾಗಿ ಪ್ರೆಸ್‌ನಲ್ಲಿ ಬರುತ್ತವೆ. ಅದನ್ನು ಓದಿದರೆ ಸ್ವಲ್ಪಮಟ್ಟಿಗೆ ಮಾನ್ಯ ಸದಸ್ಯರಿಗೆ ಅರ್ಥವಾಗಬಹುದು. ಪ್ರತಿಯೊಂದು ಸಾರಿಯೂ ನಾನು ದೆಹಲಿಗೆ ಹೋಗಿ ಬಂದಮೇಲೆ ಅದರಿಂದೇನು ರಿಜಲ್ಟ್ ಬಂತು ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ.

Halakki Vokkaligas in North Kanara District

102. Sri D. S. NADKARNI (Ankola).—

Will the Minister for Social Welfare be pleased to state :—

(*a*) whether they are aware that Halakki Vokkaligas of North Kanara District are the Adivasis of the said district ;

(*b*) the reason for not considering them as Adivasis so far ?

Sri V. L. PATIL (Minister for Social Welfare).—

(*a*) Yes.

(*b*) This is a matter to be considered at the Central level.

ಶ್ರೀ ಡಿ. ಎಸ್. ನಾಡಕರ್ಣಿ.—ಈ ಜನಾಂಗದವರ ಸಂಖ್ಯೆ ನಮ್ಮ ಜಿಲ್ಲೆಯಲ್ಲಿ ಎಷ್ಟಿದೆ ? ಜಿಲ್ಲಾ ಸಂಖ್ಯೆಗನುಗುಣವಾಗಿ ಆ ಪ್ರಮಾಣ ಎಷ್ಟು ಇದೆ ?

†ಶ್ರೀ ವಿ. ಎಲ್. ಪಾಟೀಲ್.—ಆ ಸಂಖ್ಯೆ 29,283 ಆಗಿದೆ. ಜಿಲ್ಲಾ ಪ್ರಮಾಣವನ್ನು ಇದರ ಪ್ರಪೋರ್ಷನೇಟಾಗಿ ತೆಗೆದುಕೊಳ್ಳಬಹುದು.

ಶ್ರೀ ಡಿ. ಎಸ್. ನಾಡಕರ್ಣಿ.—ಇದರಲ್ಲಿ ಶಿಕ್ಷಣ ಪಡೆದವರ ಪ್ರಮಾಣವೆಷ್ಟಿದೆ ? ಗ್ರಾಜುಯೇಟ್ ಆದವರೆಷ್ಟು ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿರುವುದನ್ನು ನೋಡಿದರೆ ಉತ್ತರ ಹೇಳುವುದು ಕಷ್ಟವಾಗುತ್ತದೆ. ಅವರು ಉತ್ತರದಲ್ಲಿ ನೋಡಿ ಆ ವಿಚಾರವನ್ನು ತಿಳಿಯಬಹುದು.

ಶ್ರೀ ಎಂ. ಎಂ. ಜಾಲಿನಟ್ಟಿ.— (ಬಿ) ಗೆ ಉತ್ತರವಾಗಿ This is a matter to be considered at the Central level ಎಂದು ಹೇಳಿದಿರಿ. ನಮ್ಮ ರಾಜ್ಯ ಸರ್ಕಾರದವರು ಆ ದಿಸೆಯಲ್ಲಿ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ, ಅವರ ಶಿಕ್ಷಣ, ಆರ್ಥಿಕ ಪರಿಸ್ಥಿತಿ, ಸುಧಾರಣೆ ಬಗ್ಗೆ ಇದುವರೆಗೆ ಸಾಕಷ್ಟು ಲಕ್ಷ್ಯ ಕೊಡದೆ ಇರುವುದರಿಂದ ಆ ಜನಾಂಗ ಕ್ಷೀಣವಾಗುತ್ತಾ ಇದೆ ಎನ್ನುವುದು ಸರಕಾರದ ಲಕ್ಷ್ಯಕ್ಕೆ ಬಂದಿದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಲಕ್ಕುರು ಕಮಿಟಿಯವರು 1965 ರಲ್ಲಿ ಕೊಟ್ಟ ವರದಿಯಲ್ಲಿ ಆ ಕಮ್ಯೂನಿಟಿಯನ್ನು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನಲ್ಲಿ ಸೇರಿಸಿಲ್ಲ. ಸರಕಾರದವರು ಅವರನ್ನು ಹಿಂದುಳಿದ ಜನಾಂಗವೆಂದು ತಿಳಿದುಕೊಂಡು ನವಂಬರ್ 1967 ರಲ್ಲಿ ಕೇಂದ್ರ ಸರಕಾರಕ್ಕೆ ಈ ಜನಾಂಗವನ್ನು ಷೆಡ್ಯೂಲ್ ಟ್ರೈಬ್ಸ್‌ನಲ್ಲಿ ಹಾಕಬೇಕೆಂದು ಶಿಫಾರಸು ಮಾಡಿದ್ದಾರೆ. ಮುಖ್ಯಮಂತ್ರಿಗಳು ಕೇಂದ್ರಕ್ಕೆ ಒತ್ತಾಯ ಮಾಡುತ್ತಾ ಇದ್ದಾರೆ. ತೀವ್ರವಾಗಿ ನಿರ್ಣಯ ಕೊಡಬೇಕೆಂದು ಕೇಳುತ್ತಾ ಇದ್ದಾರೆ. ಈ ದೃಷ್ಟಿಯಿಂದ ಸರಕಾರದ ಪ್ರಯತ್ನ ಈಗಾಗಲೇ ನಡೆದಿದೆ. ಅದು ಕೇಂದ್ರ ಸರಕಾರದವರು ಮಾಡುವಂಥ ಕೆಲಸ. ಅವರು ಪರಿಶೀಲನೆ ಮಾಡಿ ನಿರ್ಣಯ ಕೊಡಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹಾಲಕ್ಕಿ ಒಕ್ಕಲಿಗರು ಸಮಾಜದಲ್ಲಿ ಎಲ್ಲರಿಗಿಂತಲೂ ಕೆಳದರ್ಜೆಯಲ್ಲಿದ್ದಾರೆ. ಅದುದರಿಂದ ಅವರನ್ನು ಪರಿಶಿಷ್ಟ ವರ್ಗದಲ್ಲಿ ಸೇರಿಸಬೇಕೆಂದು ಶಿಫಾರಸು ಮಾಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಸರಕಾರವವರು 1967 ರಲ್ಲಿ ಈ ಜನಾಂಗವನ್ನು ಪರಿಶಿಷ್ಟ ವರ್ಗದಲ್ಲಿ ಸೇರಿಸಬೇಕೆಂದು ಶಿಫಾರಸು ಮಾಡಿ ಕಳುಹಿಸಿದೆ. ಈಗ ಶಿಫಾರಸು ಮಾಡುವಂಥ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ. ನಾಗಪ್ಪ.—ನಮ್ಮ ಭಾಗದಲ್ಲಿ ಬೇಡ ಕಮ್ಯೂನಿಟಿ, ಒಡ್ಡರ ಕಮ್ಯೂನಿಟಿಯನ್ನು ಷೆಡ್ಯೂಲ್ ಕ್ಯಾಸ್ಟ್ ಎಂದು ಪರಿಗಣಿಸಿದ್ದಾರೆ. ಆದರೆ ಬೇರೆ ಕಡೆ ಅವರನ್ನು ಪರಿಶಿಷ್ಟ ಜಾತಿಯೆ ವರೆಂದು ತಿಳಿಯುವುದಿಲ್ಲ. ಇಂತಹ ವ್ಯತ್ಯಾಸವನ್ನು ದೂರ ಮಾಡಿ ಮೈಸೂರು ರಾಜ್ಯದ ಎಲ್ಲಾ ಭಾಗದಲ್ಲೂ ಇರುವ ಒಡ್ಡರ ಕಮ್ಯೂನಿಟಿ ಮತ್ತು ಬೇಡರ ಕಮ್ಯೂನಿಟಿಯನ್ನು ಪರಿಶಿಷ್ಟ ವರ್ಗದವರೆಂದು ಟ್ರೀಟ್ ಮಾಡುವುದಕ್ಕೆ ಯೋಚನೆಮಾಡುತ್ತೀರಾ ? ಹಾಗೆ ಮಾಡಿದರೆ ಈ ಯೋಜನೆಯನ್ನು ಕೇಂದ್ರ ಸರಕಾರಕ್ಕೆ ಕಳುಹಿಸುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಆ ಪ್ರಶ್ನೆಗೆ ಉತ್ತರ ಬೇಕಾದರೆ ಎರಡನೇ ಪ್ರಶ್ನೆಯನ್ನು ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಷೆಡ್ಯೂಲ್ ಟ್ರೈಬ್ಸ್‌ನಲ್ಲಿ ಈ ಜನಾಂಗವನ್ನು ಸೇರಿಸ ಬೇಕು ಎಂದು ಮಾನ್ಯ ಸದಸ್ಯರು ಶಿಫಾರಸು ಮಾಡಿ ಕಳುಹಿಸಿದ ಮೇಲೆ ಕೇಂದ್ರ ಸರಕಾರವವರ ಮಂಜೂರಾತಿ ಬರುವುದಕ್ಕೆ ಕಾದು ನಿಂತಿದ್ದೀರಾ ಅಥವಾ ಇದುವರೆಗೆ ಅವರಿಗೆ ಏನಾದರೂ ಸೌಲಭ್ಯ ಕೊಟ್ಟಿದ್ದೀರಾ ? ಹಾಗೆ ಕೊಟ್ಟಿದ್ದರೆ ಯಾವ ಯಾವ ಸೌಲಭ್ಯಗಳನ್ನು ಕೊಡಲಾಗಿದೆ.

ಶ್ರೀ ವಿ. ಎಲ್. ಪಾಟೀಲ್.—ರಾಜ್ಯದಲ್ಲಿರುವ ಈ ತರಹ ಜನರಿಗೆ ಯಾವ ಸೌಲಭ್ಯವನ್ನು ಕೊಡುತ್ತಿದ್ದೇವೆಯೋ ಅದೇ ಸೌಲಬ್ಯವನ್ನು ಈ ಜನರಿಗೂ ಕೊಡುತ್ತೇವೆ.

ಶ್ರೀ ಎಸ್. ಪಿ. ಅಗ್ನಿಹೋತ್ರಿ.—ನಮ್ಮಲ್ಲಿ ಜನರು ಹರಿಜನರು ಗಿರಿಜನರು ಆಗಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ ಅವರಿಗೆ ಸಹಾಯ ಮಾಡುತ್ತೀರಾ ?

(ನಗು)

ಶ್ರೀ ಡಿ. ಎಸ್. ನಾಡಕರ್ಣಿ.—ಮಾನವೀಯತೆಯ ದೃಷ್ಟಿಯಿಂದ ಇವರ ಪ್ರಗತಿಯ ಬಗ್ಗೆ ಮತ್ತು ಅವರಿಗೆ ಸಹಾಯವಾಗುವಂತೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಈ ತರಹ ಹಿಂದುಳಿದ ಜನಾಂಗದವರಿಗೆ ಯಾವ ತರಹ ಸೌಲಭ್ಯಗಳನ್ನು ಕೊಡಬೇಕೋ ಅದನ್ನು ಸರಕಾರ ಯೋಚನೆ ಮಾಡುತ್ತಾ ಇದೆ. ಸಾಧ್ಯವಾದಷ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ತಾವು ಈ ಜನಾಂಗದವರಿಗೆ ತೊಂದರೆ ಉಂಟಾಗಿರುವುದರಿಂದ ಆದಷ್ಟು ತೀವ್ರ ಅವರಿಗೆ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಮುಖ್ಯ ಮಂತ್ರಿಗಳು ಕೇಂದ್ರ ಸರಕಾರವನ್ನು ರಿಮೈಂಡ ಮಾಡುತ್ತಾ ಇದ್ದಾರೆ, ಪ್ರೆಸ್ ಮಾಡುತ್ತಾ ಇದ್ದಾರೆ ಎಂದು ಆಗಲೇ ಹೇಳಿದೆ.

Construction of Pick-ups at Nelahal, Belgumba and Chikkanaravangala Villages

112. Sri B. P. GANGADHAR (Tumkur).—

Will the Minister of State for Minor Irrigation be pleased to state :—

(*a*) whether there has been a longstanding agitation by the Public as well as by the local M.L.A. with regard to the construction of pick-ups at Nelahal, Belgumba and Chikkanaravangala villages in Tumkur Taluk ;